# ಪ್ರೀತಿಪಾತ್ರರೊಂದಿಗೂ ಹೆಣ್ಣು ಮುಕ್ತವಾಗಿ ಭಾವನೆಗಳನ್ನು ಹೇಳಲಾಗದು

**ಶಾಯಿಸ್ತ ಖಾನ್ | ಕಾಶ್ಮೀರಿ**

1 ವ್ಯಕ್ತಿಯೊಬ್ಬ ತನ್ನ ಆಲೋಚನೆ ಮತ್ತು ಗ್ರಹಿಕೆಗಳನ್ನು ಸಂವಹನ ಮಾಡುವುದಕ್ಕೆ ಬರವಣಿಗೆ ಬಹಳ ಸುಂದರ ಮಾಧ್ಯಮ. ಸಮಾಜವನ್ನು ಅರ್ಥ ಮಾಡಿಕೊಳ್ಳಲು ಅದೊಂದು ಸೃಜನಶೀಲ ಮಾಧ್ಯಮ. ಈ ಸಮಾಜದ ಚಿತ್ರಣವೊಂದನ್ನು ವ್ಯಕ್ತಿಯು ಚಿತ್ರಿಸಿಕೊಂಡು ಅರ್ಥಮಾಡಿಕೊಳ್ಳಬೇಕಿದ್ದರೆ ಬರವಣಿಗೆ ಒಂದು ಪರಿಣಾಮಕಾರಿ ಸಾಧನ.

2 ಮಹಿಳೆಯೊಬ್ಬಳು ತನ್ನ ಅಂತರಂಗವನ್ನು ಮುಕ್ತವಾಗಿ ಹಂಚಿಕೊಳ್ಳುವುದು ಸಾಧ್ಯವಿಲ್ಲ. ತನ್ನ ಪ್ರೀತಿಪಾತ್ರರೊಂದಿಗೂ ಭಾವನೆಗಳನ್ನು ಮುಕ್ತವಾಗಿ ಹೇಳುವುದು ಸಾಧ್ಯವಿಲ್ಲ ಅನಿಸುತ್ತದೆ.

3 ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಹಲವಾರು. ಸಾಮಾಜಿಕವಾಗಿ ಅವರನ್ನು ಪ್ರತ್ಯೇಕವಾಗಿಡುವುದು, ಏಕಾಂಗಿತನ ಮತ್ತು ಹಣಕಾಸಿನ ಅಭದ್ರತೆಗಳು, ಮಾನಸಿಕ ಕ್ಷೋಭೆಗಳು – ಇವುಗಳೆಲ್ಲ ತೊಂದರೆಗಳೇ ಆಗಿವೆ.

4 ಹೌದು. ನಾನು ಪ್ರಜ್ಞಾಪೂರ್ವಕವಾಗಿ ಮಾತೃಭಾಷೆಯಲ್ಲಿ ಬರೆಯಲು ನಿರ್ಧರಿಸಿದೆ. ನಮ್ಮ ಸಮುದಾಯದವರು ಆ ಭಾಷೆಯನ್ನು ಬಹಳ



ಕಾಶ್ಮೀರಿ ಕಥೆಗಾರ್ತಿ ಶಾಯಿಸ್ತ ಖಾನ್ (ಜನನ: 1991) ವೃತ್ತಿಯಿಂದ ಶಿಕ್ಷಕಿ. ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪುರಸ್ಕಾರ ಪಡೆದಿರುವ ‘ಬ್ರಂಡೆ ಬರಸ್ ಪೇಠ್’ ಅವರ ಮೊದಲ ಕಥಾಸಂಕಲನ. ಪ್ರಸಿದ್ಧ ಕಾಶ್ಮೀರಿ ಕಥೆಗಾರ ಅಖ್ತರ್ ಮೊಹಿದಿನಿನ್ ಅವರ ಸಾಹಿತ್ಯದ ಕುರಿತು ‘ಶೀರರಝ್’ ಎಂಬ ಸಂಶೋಧನಾ ಬರಹ ಪ್ರಕಟಿಸಿದ್ದಾರೆ.